

ಒಂದು ಇಕ್ಕಟ್ಟಿನ ಸನ್ನಿವೇಶ ಸೃಷ್ಟಿಸಿ, ಅದರೊಳಗೆ ಪಾತ್ರಗಳು ಪರದಾಡುವ ರೀತಿಯಲ್ಲಿಯೇ ನಗುವುಕ್ಕಿಸುವ ಬ್ರೇನ್‌ಲೆಸ್ ಕಾಮಿಡಿಯ ಕಿರುಚಿತ್ರವಿದು.

ಗೌರಿ

# ವೃತ್ತದ ಒಳಗೊಂದು ವೃತ್ತ

‘ಬ್ರೇನ್‌ಲೆಸ್ ಕಾಮಿಡಿ’ ಎನ್ನುವುದು ಬಹು ಹಿಂದಿನದೂ ಬಹುಜನಪ್ರಿಯವಾದದ್ದೂ ಆಗಿರುವ ಒಂದು ಪ್ರಕಾರ. ರಂಗಭೂಮಿಯಿಂದ ಹಿಡಿದು ಇಂದಿನ ಸಿನಿಮಾರಂಗದವರೆಗೂ ಇದು ಗೆಲ್ಲುವ ಕುದುರೆಯೂ ಹೌದು. ಇಲ್ಲಿ ಲಾಜಿಕ್‌ಗಳಿಗೆ ಹೆಚ್ಚಿನ ಅವಕಾಶ ಇಲ್ಲ. ಲಾಜಿಕ್ ಚೆಂದಿಯೆಬ್ಬಿಸಿ ‘ಖಾಲಿಪುಕ್ಕೋಟ್’ ನಗಿಸುವ ಮ್ಯಾಜಿಕ್ ಈ ಪ್ರಕಾರದ ಮುಖ್ಯ ಲಕ್ಷಣ. ಅದಕ್ಕಾಗಿಯೇ ಒಂದು ದೊಡ್ಡ ಪ್ರೇಕ್ಷಕವರ್ಗವೇ ಇರುವುದರಿಂದ ಅಚ್ಚಕಟ್ಟಾಗಿ ನಗೆಯ ಸಂಗತಿಗಳನ್ನು ಜೋಡಿಸಿದರೆ ಆ ನಾಟಕ/ಸಿನಿಮಾ ಗೆಲ್ಲುವುದೂ ನಿಶ್ಚಿತವೇ ಆಗುತ್ತದೆ.

ಹಾಗೆ ನೋಡಿದರೆ ಕಿರುಚಿತ್ರ ಪ್ರಕಾರದಲ್ಲಿ ಇಂಥ ಬ್ರೇನ್‌ಲೆಸ್ ಕಾಮಿಡಿ ಪ್ರಯತ್ನಗಳು ಸಾಕಷ್ಟು ನಡೆದಿವೆ. ಆದರೆ ಅದಕ್ಕೊಂದು ಅಚ್ಚುಕಟ್ಟಾದ ಫ್ರೇಮ್ ಇರುವುದು ಅಪರೂಪ. ‘2 ಸ್ಕ್ವೇರ್’ ಹೀಗೆ ಅಚ್ಚುಕಟ್ಟಾದ ಫ್ರೇಮ್‌ನೊಳಗೇ ನಗೆಯುಕ್ಕಿಸುವ ಕಾರಣಕ್ಕೆ ಗಮನಸೆಳೆಯುತ್ತದೆ. ಐದೇ ನಿಮಿಷ ಕಾಲಾವಧಿಯ ಈ ಕಿರುಚಿತ್ರದಲ್ಲಿ ಇರುವುದು ಮೂರು ಪಾತ್ರಗಳು. ನಾಲ್ಕನೇ ಒಂದು ಪಾತ್ರವೂ ಇದೆಯಾದರೂ ಅದು ಬರುವುದು ಬರೀ ಶಾರೀರದ ಮೂಲಕ ಮತ್ತು ಈ ಪಾತ್ರಗಳ ಸಂಭಾಷಣೆಯಲ್ಲಿನ ಉಲ್ಲೇಖಗಳ ಮೂಲಕ.

ಹಾಗೆ ನೋಡಿದರೆ ಇದರ ವಸ್ತುವೂ ತುಂಬ ಹೊಸದೇನಲ್ಲ. ‘ವಿವಾಹೇತರ ಸಂಬಂಧ’ ಎನ್ನುವುದು ಸಿನಿಮಾ, ನಾಟಕಗಳಲ್ಲಿ ಅತಿ ಹೆಚ್ಚು ಬಳಕೆಯಾದ ಕಾಮಿಡಿ ವಸ್ತುಗಳಲ್ಲಿ ಒಂದು. ಇಲ್ಲಿರುವುದೆ ಅದೇ ವಸ್ತು. ಇಡೀ ಚಿತ್ರ ನಡೆಯುವುದು ಒಂದೇ ರೂಮಿನಲ್ಲಿ.

ಮಾಮೂಲಿ ಸಮಯಕ್ಕಿಂತ ಮೊದಲೇ ಮನೆಗೆ ಬಂದ ನಿಖಿಲ್‌ಗೆ ಅವನ ಹೆಂಡತಿಯ ನಡೆ ನುಡಿ ಬಗ್ಗೆ ಏನೋ ಸಂದೇಹ ಬರುತ್ತದೆ. ಬೆಡ್‌ರೂಮಲ್ಲಿ ಕೂತು ಪುಸ್ತಕ ಓದುತ್ತ ಮಲಗಿದ್ದ ಅವಳ ಮುಖಭಾವ ನೋಡಿ ಅವನಿಗೇನೋ ಅನುಮಾನ. ಅದಕ್ಕೆ ತಕ್ಕ ಹಾಗೆ ಅವನ ಹೆಂಡತಿಯ ಪ್ರಿಯಕರ ಚಾಂದ್ ಕೂಡ ಅದೇ ರೂಮಿನ ಮಂಚದ ಅಡಿಯಲ್ಲಿ ಅಡಗಿದ್ದಾನೆ. ಅದೇ ಸಮಯಕ್ಕೆ ನಿಖಿಲ್‌ನ ಮೊಬೈಲ್‌ಗೆ ಚಾಂದ್‌ನ ಹೆಂಡತಿ ಸುಹಾನಾಳ ಮೆಸೇಜ್ ಬರುತ್ತದೆ. ಅದನ್ನು ನೋಡಿ ನಿಖಿಲ್ ಹೆಂಡತಿ ಅವರಿಬ್ಬರ ನಡುವೆ ಅಫೇರ್ ಇದೆ ಎಂಬ ಕಾರಣಕ್ಕೆ ಜಗಳವಾಡುತ್ತಾಳೆ. ಮಂಚದಡಿಗೆ ಮಲಗಿದ್ದ ಚಾಂದ್‌ಗೆ ತನ್ನ ಹೆಂಡತಿಯೊಂದಿಗೆ ನಿಖಿಲನ ಸಂಬಂಧ ಇರುವ ಸಂಗತಿ ಕೇಳಿ ಆಘಾತವಾಗುತ್ತದೆ.

ಹೀಗೆ ಎರಡು ದಂಪತಿಯ ನಡುವಿನ ಅನುಮಾನಗಳ ಚಟಪಟಾಕಿ, ತಮ್ಮ ತಪ್ಪನ್ನು ಮುಚ್ಚಿಕೊಂಡು ಇನ್ನೊಬ್ಬನ ತಪ್ಪಿನ ಬಗ್ಗೆ ಚೀರಾಡುವ, ಆ ಮೂಲಕ ಅವರನ್ನು ಅಪರಾಧಿಗಳನ್ನಾಗಿಸುವ ಸರ್ಕಸ್ಸುಗಳಲ್ಲಿಯೇ ಕಿರುಚಿತ್ರ ನಗುವುಕ್ಕಿಸುತ್ತದೆ.

ಇದು ಸವೆದ ಹಾದಿಯಲ್ಲಿ ರೂಪುಗೊಂಡ ಕಿರುಚಿತ್ರವೇ. ಆದರೆ ಜನಪ್ರಿಯ ಸೂತ್ರವನ್ನೇ ಅಚ್ಚುಕಟ್ಟಾಗಿ ಬಳಸಿಕೊಳ್ಳುವುದೂ ಸುಲಭವೇನಲ್ಲ. ಹರಿತವಾದ ಸಂಭಾಷಣೆ, ಚುರುಕಾದ ನಟನೆ ಈ ಕಿರುಚಿತ್ರದ ಜೀವಾಳ. ಹಾಗಾಗಿಯೇ ಈ ಕಿರುಚಿತ್ರ ಐದು ನಿಮಿಷದ ಅವಧಿಯಲ್ಲಿಯೇ ನಗುವುಕ್ಕಿಸುತ್ತದೆ.

‘ಬಾ ನಾನು ನಿಂಗೆ ಎಲ್ಲ ವಿವರಿಸ್ತೇನೆ’ ಎಂದು ಹೇಳಿ ಹೆಂಡತಿಯನ್ನು ಕೈ ಹಿಡಿದು ಮಂಚದ ಮೇಲೆ ಕೂರಿಸಿ ಏನು ವಿವರಿಸುವುದು ಎಂದೇ ಗೊತ್ತಾಗದೇ ಗಂಡ ಒದ್ದಾಡುವುದು, ಮಂಚದ ಕೆಳಗೆ ಅಡಗಿದ್ದ ಚಾಂದ್, ಸುಹಾನಾ ತನಗೆ ಡಿವೋರ್ಸ್ ಕೊಡುತ್ತಾಳಂತೆ ಎಂದು ಹೇಳಿದಾಕ್ಷಣ ಬೆಚ್ಚಿ ಎದ್ದು ನಿಂತು ಬಡಬಡಿಸುವುದು ಇಂಥ ಹಲವು ಪೇಚಿನ ಸಂದರ್ಭಗಳು ಇಲ್ಲಿವೆ. ಹೆಚ್ಚಿನ ಲಾಜಿಕ್ ಇಲ್ಲದೆ ಸುಮ್ಮನೇ ಐದು ನಿಮಿಷ ನೋಡಿ ನಕ್ಕು ಹಗುರ ಆಗುವವರಿಗಾಗಿಯೇ ಇರುವ ಕಿರುಚಿತ್ರ ಇದು.



ಹೆಸರು: 2 ಸ್ಕ್ವೇರ್
ನಿರ್ದೇಶನ: ವೇದ್ ವಿ. ರಾವ್ತಾನಿ
ಛಾಯಾಗ್ರಹಣ: ದೀಕ್ಷಾ ಅಗರವಾಲ್
ಧ್ವನಿ ವಿನ್ಯಾಸ: ಅಂಕುರ್
ಸಂಕಲನ: ಕಲ್ಮೇಶ್
ತಾರಾಗಣ: ಗರೀಮಾ, ಹಿಮಾಂಶು, ಸಾಗರ್, ಅನ್‌ಮೋಲ್

ಈ ಕಿರುಚಿತ್ರ ವೀಕ್ಷಣೆಗೆ https://bit.ly/3jJxuCF ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.